Mr. DEPUTY SPEAKER.—There will be a statement on behalf of the Government as early as possible. The hon. Minister has given an assurance.

Glucose Injections manufactured by Sarabhai Chemicals

Sri S. BANGARAPPA.—Hon. Minister said that he would make a statement tomorrow or the day after, I have given another adjournment Motion relating to another matter. This relates to Glucose injections. ಇದರಿಂದ ದೇಶದಲ್ಲಿ ಸುಮಾರು 20 ರಿಂದ 50 ಜನರು ಸತ್ತು ಹೋಗಿದ್ದಾರೆ. ಡಿಕ್ರುಸ್ಟಿಸಿನ್ ಸೂಜಿ ಮದ್ದನ್ನು ಪ್ರೊಡ್ಯೂಜ್ ಮಾಡತಕ್ಕ Sarabhai chemicals ಕಂಪನಿಯವರಿಂದ ಪಡೆದಂಥ ಔಷಧಿ, ಸೂಜಿ ಮದ್ದನ್ನು ತೆಗೆದುಕೊಂಡಿದ್ದರಿಂದ ಅನೇಕ ಜನ ಸತ್ತು ಹೋಗಿದ್ದಾರೆ. ನಮ್ಮ ರಾಜ್ಯ ಸರ್ಕಾರದವರು ಕೂಡ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಇಂಜೆಕ್ಷನ್ ಟ್ಯೂಬ್‌ಗಳನ್ನು ಖರೀದಿ ಮಾಡಿದ್ದಾರೆ. I have info mation yesterday morning that some people have suffered after taking injections in the Victoria Hospital in Bangalore.

ಉಪಾಧ್ಯಕ್ಷರು.—ಕಾನ್‌ಪುರದ ಸಲುವಾಗಿ ಬರೆದದ್ದು ಇದೆ. ಹೆಲ್ತ್ ಡಿಪಾರ್ಟ್‌ಮೆಂಟಿನವರು ವಿಜಿಲೆನ್ಸ್ ಕಮಿಷನರ್‌ರವರ ಸಹಾಯವನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೀರಿ, ನಾನು ಅದನ್ನು ಅಪ್ರಿಷಿಯೇಟ್ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಜನ ಸತ್ತರೆ ನಿಲುವಳಿ ಸೂಚನೆ ಅಗತ್ಯವಾಗುತ್ತದೆಯೇ ? ರೂಲ್ಸ್ ಪ್ರಕಾರ ಜನ ಸತ್ತಮೇಲೇ ನಿಲುವಳಿ ಸೂಚನೆ ತೆಗೆದುಕೊಳ್ಳುವುದು ಎಂದರೆ ಕಷ್ಟವಾಗುತ್ತದೆ. It is a very urgent matter. ಅನೇಕ ಲಕ್ಷ ರೂಪಾಯಿಗಳಿವೆ. ಡಿಕ್ರುಸ್ಟಿಸಿನ್ ಇಂಜೆಕ್ಷನ್, ಗ್ಲೂಕೋಸ್ ಇಂಜೆಕ್ಷನ್ ಟ್ಯೂಬ್‌ಗಳನ್ನು ಹೆಲ್ತ್ ಡಿಪಾರ್ಟ್‌ಮೆಂಟಿನವರು ಖರೀದಿ ಮಾಡಿದ್ದಾರೆ. ಅದಕ್ಕೋಸ್ಕರ ಸರ್ಕಾರದ ವತಿಯಿಂದ ಹೇಳಿಕೆ ಕೊಟ್ಟು, at least the Government should see that sale of these products are stopped immediately. ಇಲ್ಲದಿದ್ದರೆ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ತಮಗೆ ಈ ಬಗ್ಗೆ ಎಷ್ಟು ಅಭಿಮಾನ ಇದೆಯೋ ಅಷ್ಟೇ ಅಭಿಮಾನ ಸರ್ಕಾರಕ್ಕೂ ಇದೆ. ಇದನ್ನು ತಾಪು ಒಪ್ಪಬೇಕು ಆದುದರಿಂದ ತಾವು ಇದನ್ನು ಕಾಲ್ ಅಟೆನ್‌ಷನ್ ಆಗಿ ಕಳುಹಿಸಿಕೊಟ್ಟರೆ ಮುಂದೆ ಆಲೋಚನೆ ಮಾಡೋಣ.

ಉಪಾಧ್ಯಕ್ಷರು.—ಆಗಿರತಕ್ಕಂಥ ಅನ್ಯಾಯದ ಬಗ್ಗೆ ಅದನ್ನು ಸರಿಪಡಿಸಲು ಸರ್ಕಾರದವರು ಎಷ್ಟು ದಕ್ಷತೆ ವಹಿಸಬೇಕೋ ಅಷ್ಟನ್ನು ವಹಿಸಿತ್ತಾರೆ ಅವರು ತಿಳಿಸುತ್ತಾರೆ. ಇಷ್ಟು ಹೇಳಿದರೆ ತಮಗೆ ತೃಪ್ತಿ ಆಗಬಹುದು.

ಶ್ರೀ ಎಸ್. ಬಂಗಾರಪ್ಪ.—ಅದರ ಬಗ್ಗೆ ನಾನು ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಸರ್ಕಾರದವರು ಆಲೋಚನೆ ಮಾಡಿ ಅನಂತರ ಹೇಳಿಕೆ ಕೊಡುತ್ತೇನೆ ಎಂದರೆ h is not ready with the statement.

Mr. DEPUTY SPEAKER.—I know the anxiety of the hon. Member.

Sri S. BANGARAPPA.—The Hon. Minister for Public Works is saying that a statement would be made in due course. That is a very vague statement.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ತಾವು ಇಷ್ಟು ಕಾತುರತೆಯಿಂದ ಹೇಳಿದ ವಿಷಯವನ್ನು ನಾವು ಅಷ್ಟು ಅನಾದರಣೆಯಿಂದ ತೆಗೆದುಕೊಳ್ಳುತ್ತೇವೆ ಎಂದು ತಾವು ಭಾವಿಸಬಾರದು. ತಮಗೆ ಇದರ ಬಗ್ಗೆ ಎಷ್ಟು ಉತ್ಸಾಹ ಇದೆಯೋ ಅಷ್ಟೇ ಉತ್ಸಾಹ ನಮಗೂ ಇದೆ. ಆದಷ್ಟು ಬೇಗ ಎಂದರೆ ಈಗ ಮಾನ್ಯ ಆರೋಗ್ಯ ಮಂತ್ರಿಗಳು ಹೊರಗೆ ಹೋಗಿದ್ದಾರೆ, ಅವರಿಗೆ ತಿಳಿಸಿ ಸಾಧ್ಯವಾದರೆ ನಾಳೆಯೇ ಒಂದು ಹೇಳಿಕೆಯನ್ನು ಮಾಡಿಸೋಣ.

ಶ್ರೀ ಜೆ.ಎಸ್. ಅಮ್ಮಣ್ಣನವರ್.—*Re*: **Bus accident** ಸ್ವಾಮಿ ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕಳಿಹಿಸಿದ್ದೇನೆ. ಅದು ಏನೆಂದರೆ ಒಂದು ಬಸ್ಸು ಆಕ್ಸಿಡೆಂಟ್ ಆಗಿ ಅದರಲ್ಲಿ 75 ಜನರಿಗೆ ಗಾಯಗಳಿಗಿ 6 ಜನ ಮೃತಿಪಟ್ಟಿದ್ದಾರೆ. ಇನ್ನೂ ಕೆಲವು ಜನ ಸಾಯುವ ಸ್ಥಿತಿಯಲ್ಲಿದ್ದಾರೆ. ಆದುದರಿಂದ ಸರ್ಕಾರದವರಿಂದ ಇದರ ಬಗ್ಗೆ ಒಂದು ಸ್ಟೇಟ್‌ಮೆಂಟನ್ನು ಕೊಡಿಸಬೇಕು ಎಂದು ಹೇಳುತ್ತೇನೆ.

Mr. DEPUTY SPEAKER.—It will be examined. Due priority will be given

Dispute at Shahabad Cement Factory

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ). - ಅಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಅದು ಯಾವುದರ ಬಗ್ಗೆ ಎಂದರೆ ಷಹಬಾದಿನಲ್ಲಿ ನಡೆದಂಥ ಘಟನೆ ಬಗ್ಗೆ. ಅಲ್ಲಿ ಒಂದು ದೊಡ್ಡ ಭಾರಿ ಘಟನೆ ನಡೆದಿದೆ. ಅಲ್ಲಿ ಕಾರ್ಮಿಕರ ಮೇಲೆ ಲಾಠಿ ಚಾರ್ಜ್ ನಡೆದಿದೆ. ಮತ್ತು ಆ ಕಾರ್ಮಿಕರು 53 ದಿನಗಳಿಂದ ಕೆಲಸ ಇಲ್ಲದೆ ಮುಷ್ಕರದಲ್ಲಿದ್ದಾರೆ. ಮತ್ತು ಈಗ ಏನಾಗಿದೆ ಎಂದರೆ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಬರಬರುತ್ತಾ ಲಾ ಅಂಡ್ ಆರ್ಡರ್ ಸಿಚುಯೇಷನ್ ಆಗುತ್ತ ಇದೆ. ಮತ್ತು ಅಲ್ಲಿ ಪೋಲೀಸರು ಕೆಲವರನ್ನು ಅರೆಸ್ಟ್ ಮಾಡಿದ್ದಾರೆ ಎಂದು ತಿಳಿದು ಬಂದಿದೆ. ಆದುದರಿಂದ ನಾನು ಈ ಒಂದು ಅಡ್ಜರ್ನ್‌ಮೆಂಟ್ ಪ್ರೋಪ್ಷನ್ ಅನ್ನು ತೆಗೆದು ಕೊಂಡು ಬಂದಿದ್ದೇನೆ. ನಾನು ಬರೀ ಸ್ಟೈಕ್ ವಿಷಯ ಮಾತನಾಡಬೇಕು ಎನ್ನುವ ಇಚ್ಛೆ ನನಗೆ ಇಲ್ಲ. ಅಲ್ಲಿರಾ ಅಂಡ್ ಆರ್ಡರ್ ಸಿಚ್ಯುಯೇಷನ್ ಏನು ಆಗಿದೆ ಆ ಬಗ್ಗೆ ಸರ್ಕಾರದ ಧೋರಣೆ ಏನು ಇರಬೇಕು ಅದನ್ನು ಎತ್ತಿ ತೋರಿಸಬೇಕು ಎನ್ನುವುದು ನನ್ನ ಅಭಿಪ್ರಾಯ. ಕಾರ್ಮಿಕರ ಪ್ರಶ್ನೆಯನ್ನು ಬಗೆಹರಿಸಬೇಕು ಎನ್ನುವುದು ನನ್ನ ಅಭಿಪ್ರಾಯ. ಸುಮಾರು 53 ದಿವಸಗಳಿಂದ ಮುಷ್ಕರ ಹೂಡಿರುವುದರಿಂದ ಒಂದು ಸಾವಿರ ಕುಟುಂಬಗಳು ಊಟ ಇಲ್ಲದೆ ನರಳುತ್ತಿದ್ದಾರೆ. ಆದಕ್ಕೋಸ್ಕರ ನಾನು ಈ ಒಂದು ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬಂದಿದ್ದೇನೆ. ಆದುದರಿಂದ ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟು ಕೊಟ್ಟು ಸಾಕಾಗಿದೆ. ಒದಕ್ಕೂ ಉತ್ತರ ಕೊಡಬೇಕಾದ ಪದ್ಧತಿಯೇ ಬಂದಿಲ್ಲ. ಒಂದು ಗಮನ ಸೆಳೆಯುವ ಸೂಚನೆಗೆ ಒಂದು ವಾರವಾದರೂ ಉತ್ತರ ಬರಲಿಲ್ಲ ಎಂದರೆ ಸರ್ಕಾರ ಏನು ಮಾಡುತ್ತದೆ ? ಯಾವರೀತಿಯಾಗಿ ಆಡಳಿತ ನಡೆಸುತ್ತದೆ ! ಇದು ಎಲ್ಲಿ ಹೋಗುತ್ತದೋ. ಎಲ್ಲಿ ನಿಲ್ಲುತ್ತದೋ ಗೊತ್ತಾಗುವುದಿಲ್ಲ. ಆದುದರಿಂದ ಇದನ್ನು ತಿಳಿಸಬೇಕು.

Mr. DEPUTY SPEAKER.—The hon. Member knows what exactly would come under rule 50. The matter referred to by the hon. Member does not come within that rule. However, Government will be requested to make a statement.

Sri M. S. KRISHNAN.—If it is just a case of strike or lathi-charge I know that it will not come under rule 50. But what has happened is that the industrial dispute between the workers and management has now developed into a law and order situation. Here I would like to discuss a policy question as to how the situation should be